ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಒ.ಎಸ್.ನಂಃ 21/2013**

ಪಿಡಬ್ಲ್ಯುಃ -2

<u>ದಿನಾಂಕಃ 04.04.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಎಂ ಎಸ್ ಜೆ ವಕೀಲರಿಂದಃ-</u>

ನಾನು ನನ್ನ ತಂದೆ ಜೊತೆಯಲ್ಲಿಯೇ ವಾಸವಿದ್ದೇವೆ. ನನ್ನ ತಂದೆಗೆ ಮಡಿಕೇರಿಯ ಜೂನಿಯರ್ ಕಾಲೇಜು ರಸ್ತೆಯಲ್ಲಿ ಬಟ್ಟೆ ಅಂಗಡಿ ಇದೆ. ನನ್ನ ತಂದೆ ಈ ಪ್ರಕರಣ ಸಲ್ಲಿಸಿದ ಸಮಯದಲ್ಲೇ 3-4 ದಾವೆಗಳನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಎಲ್ಲಾ ಪ್ರಕರಣಗಳನ್ನು ನನ್ನ ತಂದೆಯೇ ನಡೆಸಿದ್ದಾರೆ. ಒ ಎಸ್ ನಂಬರ್ 62/2019 ನ್ನು ನನ್ನ ತಂದೆಯ ಪರವಾಗಿ ನಾನು ಅಧಿಕಾರ ಪತ್ರ ಪಡೆದು ನಡೆಸಿದ್ದೇನೆ. ಸಾಕ್ಷಿಗೆ ಒ ಎಸ್ ನಂಬರ್ 62/2019 ರ ತೀರ್ಪಿನ ಪ್ರತಿಯನ್ನು ತೋರಿಸಲಾಯಿತು. ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಒ ಎಸ್ ನಂಬರ್ 62/2019 ರಲ್ಲಿನ ಪ್ರತಿವಾದಿಯು ಈ ಪ್ರಕರಣದ ಪ್ರತಿವಾದಿ (ಬಿ) ಎಂದರೆ ಸರಿ. ಒ ಎಸ್ ನಂಬರ್ 62/2019 ರಲ್ಲಿನ ದಾವಾ ಸ್ವತ್ತು ಮತ್ತು ಈ ಪ್ರಕರಣದ ದಾವಾ ಸ್ವತ್ತು ಎರಡೂ ಒಂದೇ ಎಂದರೆ ಸರಿ. ಸದರಿ ಒ ಎಸ್ ನಂಬರ್ 62/2019 ರಲ್ಲಿ ನಾನು ಸಲ್ಲಿಸಿದ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸತ್ಯವಾಗಿವೆ ಎಂದರೆ ಸರಿ. ಸಾಕ್ಷಿಗೆ ಸದರಿ ಸಾಕ್ಷಿ ಪ್ರಮಾಣ ಪತ್ರವನ್ನು ತೋರಿಸಲಾಯಿತು ಸಾಕ್ಷಿ ಸರಿ ಎಂದು ಒಪ್ಪಿರುತ್ತಾರೆ. ಅದನ್ನು ನಿಡಿ-2 ಎಂದು ಗುರುತಿಸಲಾಯಿತು.

2. ನನ್ನ ತಂದೆ ಖರೀದಿಸಿದ ಜಾಗ ಮತ್ತು ಅದರ ಸುತ್ತಲಿನ ಕಾಂಪೌಂಡ್ ಬೇಲಿ ನನ್ನ ತಂದೆ ಖರೀದಿಸಿದ ಹಾಗೆಯೇ ಇದೆ ಎಂದರೆ ಸರಿ. ನಮ್ಮ ಜಾಗದ ಒಳಗೆ ಹೋಗಲು ಪೂರ್ವ ದಿಕ್ಕಿನ ಕಡೆ ಗೇಟು ಇದೆ ಎಂದರೆ ಸರಿ. ಸದರಿ ಗೇಟಿನಿಂದ ನಮ್ಮ ಜಾಗದ ಒಳಗೆ ನಾವೇ ರಸ್ತೆ ಮಾಡಿಕೊಂಡಿದ್ದೇವೆ. ನಮ್ಮ ಗೇಟಿನ ಅಕ್ಕಪಕ್ಕ ವಾಸದ ಮನೆಗಳು ಇವೆ. ಸದರಿ ಮನೆಗಳು ಆರ್ ಸಿ ಸಿ

ಕಟ್ಟಡಗಳು 2 ರಿಂದ 3 ಅಂತಸ್ತಿನ ಕಟ್ಟಡಗಳು ಎಂದರೆ ಸರಿ. ಪ್ರತಿವಾದಿಗಳು ಅವರ ಮನೆಗೆ ಹೋಗಲು ನಮ್ಮ ಜಾಗದ ಉತ್ತರ ದಿಕ್ಕಿನಲ್ಲಿರುವ 50 ಮೀಟರ್ ದೂರದ ರಸ್ತೆಯಿಂದ ಬರಬೇಕು ಎಂದರೆ ಸರಿ. ಸದರಿ ರಸ್ತೆಯಿಂದ ಮೂರೂವರೆ ಅಡಿ ಓಣಿಯಲ್ಲಿ ಹಾದು ಪ್ರತಿವಾದಿ ಮನೆಗೆ ಹೋಗಬೇಕು ಎಂದರೆ ಸರಿ. ಪ್ರತಿವಾದಿಯ ತಂದೆ ಕಾಲದಿಂದಲೂ ಇರುವ ಹಂಚಿನ ಮನೆ ಈಗಲೂ ಮುಕ್ಕಾಲು ಭಾಗ ಹಾಗೆಯೇ ಇದೆ ಎಂದರೆ ಸರಿ. ಸಾಕ್ಷಿ ಮುಂದವರೆದು ಪ್ರತಿವಾದಿಯ ತಂದೆ ಕಾಲದಿಂದ ಮನೆ ಇರಲಿಲ್ಲ ಪ್ರತಿವಾದಿ ಕಾಲದಿಂದ ಇದ್ದ ಮನೆ ಇದೆ ಎಂದು ನುಡಿಯುತ್ತಾರೆ.

3. ನಾನು ಪ್ರತಿವಾದಿ ಅಬ್ದುಲ್ ರೆಹಮಾನ್ ಅವರ ತಂದೆಯನ್ನು ನೋಡಿರುವುದಿಲ್ಲ. ಪ್ರತಿವಾದಿಯನ್ನು ದಾವಾ ಸ್ವತ್ತಿನ ಜಾಗವನ್ನು ನಾವು ಖರೀದಿಸಿದ ನಂತರ ನೋಡಿದ್ದೇವೆ ಎಂದರೆ ಸರಿ. ನಮ್ಮ ಮನೆಯಿಂದ ಪ್ರತಿವಾದಿಯ ಮನೆಗೆ ಹೋಗಲು ಜಾಗ ಇಲ್ಲ ಎಂದರೆ ಸರಿ. ಪ್ರತಿವಾದಿಗಳು ನಮ್ಮ ಮನೆಗೆ ಬರಬೇಕಾದರೆ 50 ರಿಂದ 100 ಮೀಟರ್ ಕ್ರಮಿಸಿ ಬರಬೇಕು ಎಂದರೆ ಸರಿ. ಪ್ರತಿವಾದಿಗಳು ಎಷ್ಟು ವರ್ಷಗಳಿಂದ ಅವರ ಜಾಗದಲ್ಲಿ ಇದ್ದಾರೆ ಎಂದು ಗೊತ್ತಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**